2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 35/2019

| | | |
|---|---|---|
| ಸಾಕ್ಷಿದಾರರ ಹೆಸರು | - ಸೋಮಾಭೋವಿ | ಪಿಡಬ್ಲೂ -16 |
| ತಂದೆಯ ಹೆಸರು | - ಸುಂಕಭೋವಿ | ಸಿಡಬ್ಲೂ -19 |
| ವಯಸ್ಸು | - 39 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಬಂಡೆಕಾಲೋನಿ, ಮಾಕನಹಳ್ಳಿ | |

ದಿನಾಂಕಃ 19.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ನನಗೆ ಗೊತ್ತಿಲ್ಲ ನಾನು ಅವರನ್ನು ಈ ಹಿಂದೆ ನೋಡಿಲ್ಲ. ಪ್ರಾಸಾ.6 ಗೊತ್ತಿಲ್ಲ. ಸಹ ಪಂಚರಾದ ಪ್ರಾಸಾ.15 ಗೊತ್ತಿಲ್ಲ.

2. ಸಾಕ್ಷಿಗೆ ಈಗಾಗಲೇ ನಿಪಿ.10 ಎಂದು ಗುರುತಿಸಲ್ಪಟ್ಟಿರುವ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಗಳನ್ನು ನಿಪಿ.10(ಡಿ) ಮತ್ತು ನಿಪಿ.10(ಇ) ಎಂದು ಗುರುತಿಸಲಾಯಿತು.

3. ಈಗ್ಗೆ 2-3 ವರ್ಷಗಳ ಹಿಂದೆ ಒಂದು ದಿನ ನಾನು ಬಂಡೆಕಾಲೋನಿ ಗೇಟಿನ ಹತ್ತಿರ ಇದ್ದಾಗ ಅಜ್ಜಂಪುರ ಪೊಲೀಸರು ಸದರಿ ಸಹಿಯನ್ನು ಪಡೆದುಕೊಂಡಿದ್ದಾರೆ. ನಮ್ಮ ಊರಿನ ಗೇಟಿನ ಹತ್ತಿರ ಒಂದು ಕಾರು ನಿಂತಿತ್ತು, ಸದರಿ ಕಾರಿನ ಹತ್ತಿರ ನನ್ನನ್ನು ನಿಲ್ಲಿಸಿ ಫೋಟೋವನ್ನು ತೆಗೆದುಕೊಂಡು ನನ್ನ ಸಹಿಗಳನ್ನು ತೆಗೆದುಕೊಂಡರು. ನಾನು ಸಹಿ ಮಾಡಿದ ದಾಖಲೆಯಲ್ಲಿ ಬರೆದಿದ್ದ ವಿಚಾರ ನನಗೆ ಗೊತ್ತಿಲ್ಲ ಕಾರಣ ನನಗೆ

ಓದಲು ಬರುವುದಿಲ್ಲ, ಪೊಲೀಸರು ಅದನ್ನು ನನಗೆ ಓದಿ ಹೇಳಿಲ್ಲ. ಮೇಲೆ ಹೇಳಿದ ಕಾರನ್ನು ಅಲ್ಲಿ ಯಾರು ನಿಲ್ಲಿಸಿದ್ದರು, ಅದು ಯಾರಿಗೆ ಸೇರಿದ್ದು, ಅದರ ಬಣ್ಣ ಮತ್ತು ನೋಂದಣಿ ಸಂಖ್ಯೆ ಏನೆಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ.

4. ಸಾಕ್ಷಿಯು ಈಗಾಗಲೇ ನಿಪಿ.11 ಮತ್ತು ನಿಪಿ.12 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ಪೊಲೀಸರು ಯಾವ ಕಾರಣಕ್ಕೆ ತೆಗೆದುಕೊಂಡರು ಮತ್ತು ಅವುಗಳಲ್ಲಿ ಕಂಡು ಬರುವ ಕಾರು ಯಾವುದು, ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಹೊರತುಪಡಿಸಿ ಸದರಿ ಫೋಟೋಗಳಲ್ಲಿ ಕಂಡು ಬರುವ ವ್ಯಕ್ತಿಗಳು ಯಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

5. ದಿನಾಂಕ 10.11.2018 ರಂದು ಪಂಚನಾಮೆಗೆ ಸಹಕರಿಸುವಂತೆ ನಿಮ್ಮನ್ನು ಮತ್ತು ಫ್ರಾಸಾ.15 ರವರನ್ನು ಹುಣಸಘಟ್ಟ ಗೇಟಿನ ಬಳಿ ಇರುವ ಸಾವೆಮರಡಿ ಕಾವಲಿನ ಅಕೇಶಿಯಾ ಮತ್ತು ನೀಲಗಿರಿ ನೆಡುತೋಪಿಗೆ ಪಂಚರಾಗಿ ಬರಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸದರಿ ಸ್ಥಳದಲ್ಲಿ ಹಾಜರಿದ್ದ

ಪ್ರಾಸಾ.6 ರವರು ಸದರಿ ಪ್ಲಾಂಟೇಷನ್ ನ ಒಳಗೆ ನಿಂತಿದ್ದ ನಿಪಿ.11 ಮತ್ತು ನಿಪಿ.12 ಫೋಟೋಗಳಲ್ಲಿ ಕಂಡು ಬರುವ ಕಾರನ್ನು ತೋರಿಸಿ ಆಗ್ಗೆ 2 ದಿನಗಳಿಂದ ಸದರಿ ಕಾರು ಅಲ್ಲಿ ನಿಂತಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಕಾರನ್ನು ಪೊಲೀಸರು ನಮ್ಮ ಸಮಕ್ಷಮ ಪರಿಶೀಲಿಸಿದಾಗ ಅದರ ಎಲ್ಲಾ ಡೋರುಗಳು ಲಾಕ್ ಆಗಿದ್ದರಿಂದ ಹಿಂಭಾಗದ ಬಲಭಾಗದ ಕಿಟಕಿಯ ಗಾಜನ್ನು ಹೊಡೆದು, ಲಾಕ್ ನ್ನು ತೆಗೆದು ಕಾರಿನ ಚಾಸೀಸ್ ನಂಬರನ್ನು ಪಡೆಯಲಾಯಿತು ಎಂದರೆ ಸರಿಯಲ್ಲ. ಸದರಿ ಕಾರಿನ ಡಿಕ್ಕಿಯಲ್ಲಿ ರಕ್ತದ ಕಲೆಗಳು ಕಂಡು ಬಂದವು ಎಂದರೆ ಸರಿಯಲ್ಲ. ಅದನ್ನು ನನ್ನ, ಪ್ರಾಸಾ.6 ಮತ್ತು ಸಹಪಂಚರಾದ ಪ್ರಾಸಾ.15 ರವರ ಸಮಕ್ಷಮ ಹತ್ತಿಯ ಮೂಲಕ ಹೊರೆಸಿ ಪೊಲೀಸರು ಸಂಗ್ರಹಿಸಿದರು ಎಂದರೆ ಸರಿಯಲ್ಲ. ಸದರಿ ಹತ್ತಿಯನ್ನು ನನ್ನ ಮತ್ತು ಮೇಲೆ ತಿಳಿಸಿದ ಪಂಚರ ಸಮಕ್ಷಮ ಹಾಕಿ ಕವರ್ ನಲ್ಲಿ ಇಟ್ಟು TRM ಎಂಬ ಅಕ್ಷರದಿಂದ ಸೀಲು ಮಾಡಿ ಸದರಿ ಕವರ್ ಮತ್ತು ಕಾರನ್ನು ಮುಂದಿನ ತನಿಖೆಗಾಗಿ ಪೊಲೀಸರು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಬಗ್ಗೆ ಪೊಲೀಸರು ಸ್ಥಳದಲ್ಲಿ ಸಂಜೆ 5.00 ಗಂಟೆಯಿಂದ 5.45 ಗಂಟೆಯವರೆಗೆ ನಿಪಿ.10 ರಂತೆ ಪಂಚನಾಮೆಯನ್ನು ಜರುಗಿಸಿ ಅದಕ್ಕೆ ನಿಮ್ಮ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಜರುಗಿಸಿದ ಸಲುವಾಗಿ ನಿಪಿ.11 ಮತ್ತು ನಿಪಿ.12 ಫೋಟೋಗಳನ್ನು ತೆಗೆದುಕೊಳ್ಳಲಾಯಿತು ಎಂದರೆ ಸರಿಯಲ್ಲ.

6. ಪಂಚನಾಮೆ ಮತ್ತು ಫೋಟೋಗಳ ಬಗ್ಗೆ ತಿಳಿದುಕೊಂಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ